## ಮಹಾರಾಷ್ಟ್ರದ ಧಾರ್ಮಿಕ ಮಹಾಪರ್ವ

# ಗಣಪತಿ ಬಪ್ಪಾ ಮೋರಯಾ

**ಧಾರ್ಮಿಕ ಆಚರಣೆ ಸಾಮುದಾಯಿಕ ಗಣೇಶೋತ್ಸವ ಚರಿತ್ರೆಯ ಭಾಗವಾಗಿ ಜನಪರ್ವವನ್ನೇ ಹುಟ್ಟುಹಾಕಿ ದಾಖಲೆ ನಿರ್ಮಿಸಿದೆ. ಮುಂಬೈನ ಗಣೇಶೋತ್ಸವದ ಸಂಭ್ರಮ ಸಮುದಾಯಗಳಲ್ಲಿ ಉಲ್ಲಾಸದ ತೇರನ್ನೇ ಎಳೆಯುತ್ತಿದೆ.**

■ **ಶ್ರೀನಿವಾಸ ಜೋಕಟ್ಟೆ**



ಗಣೇಶ ಹಬ್ಬ ಎಂದರೆ ವಿಶ್ವದಾದ್ಯಂತ ಸಂಭ್ರಮ. ಭಕ್ತಿ, ಪ್ರೀತಿ, ಸ್ನೇಹ ಸೌಹಾರ್ದ ಭಾವವ್ಯಾಪಾರದ ಈ ಉತ್ಸವ ಜನ ಸಮುದಾಯಗಳ ಸಹಜೀವನಕ್ಕೆ ಭಾಷ್ಯ ಬರೆದಂತೆ ಭಾಸವಾಗುತ್ತದೆ. ಮುಂಬೈಯಲ್ಲಿ ಗಣೇಶೋತ್ಸವ ಎಂದರೆ ಅದು ಬರೀ ಸಂಭ್ರಮವಲ್ಲ. ಹಬ್ಬದ ಹಿಂದಿನ ಚಾರಿತ್ರಿಕ ಮೈಲುಗಲ್ಲನ್ನು ಸ್ಮರಿಸುವ ಪ್ರತೀಕವೂ ಹೌದು.

ಗಣೇಶ ಉತ್ಸವದ ಭವ್ಯ ಸಂಭ್ರಮ ನೋಡಲು ಮುಂಬೈಗೆ ಭೇಟಿ ನೀಡಲೇಬೇಕು. ಆಗ ಅದು ನಗರದ ಸೌಂದರ್ಯವನ್ನು ಇಮ್ಮಡಿಗೊಳಿಸಿರುತ್ತದೆ. ಇಲ್ಲಿ ನೂರಾರು ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳು ಇಂದಿಗೂ ಅದ್ದೂರಿಯಾಗಿ ಹತ್ತು ದಿನಗಳ ಕಾಲ ಆಚರಿಸುತ್ತವೆ. ಗಿರ್‌ಗಾಂವ್‌ನ 131 ವರ್ಷದ ಕೇಶವ್ ಜಿ ಚಾಳ್ ಗಣೇಶ ಮಂಡಳಿ ಮುಂಬೈನ ಅತಿ ಹಿರಿಯ ಗಣೇಶ ಮಂಡಳಿ.

ಇಲ್ಲಿನ ನೂರಾರು ಬಡಾವಣೆಗಳು ರಂಗು ರಂಗಿನ ಪೆಂಡಾಲ್, ಬಗೆ ಬಗೆಯ ಅಲಂಕಾರ, ಸೃಜನಶೀಲ ಕಲಾವೈಭವದ ಗಣೇಶ ಮೂರ್ತಿಗಳಿಗೆ ಸಾಕ್ಷಿಯಾಗಿರುತ್ತವೆ. ಗಣೇಶ ಚತುರ್ಥಿಯಿಂದ ಅನಂತ ಚತುರ್ದಶಿ ತನಕ ಇಡೀ ಮುಂಬೈ ನವ ವಧುವಿನಂತೆ ಶೃಂಗಾರಗೊಳ್ಳುತ್ತದೆ.

ನಾಲ್ಕು ದಶಕದ ಹಿಂದೆ ಮುಂಬಯಿಗೆ ಬಂದ ದಿನಗಳಲ್ಲಿ ಮುಂಬೈಯ ಗಣೇಶೋತ್ಸವ ನಮಗೊಂದು ವಿಸ್ಮಯವೇ ಆಗಿತ್ತು. ನಾವು ಗಣೇಶೋತ್ಸವದ ಆ ಹತ್ತು ದಿನಗಳಲ್ಲಿ ಒಂದು ರಾತ್ರಿಯನ್ನು ದಾದರ್, ಲಾಲ್‌ಬಾಗ್, ಪರೇಲ್ ಕ್ಷೇತ್ರಗಳ ಗಣಪತಿ ಮಂಡಲಗಳ ವೀಕ್ಷಣೆಗೆಂದೇ ಮೀಸಲಿಡುತ್ತಿದ್ದೆವು. ರಾತ್ರಿ ನಮ್ಮ ಗಣೇಶ ದರ್ಶನ ಯಾತ್ರೆ ಹೊರಟರೆ ವಿವಿಧ ಮಂಡಲಗಳ ಗಣಪತಿ ಪ್ರತಿಮೆಗಳನ್ನು ವೀಕ್ಷಿಸಿ ಮರುದಿನ ಬೆಳಗ್ಗೆ ಲೋಕಲ್ ರೈಲು ಆರಂಭವಾಗುವ ಹೊತ್ತಿಗೆ ಮುಗಿಯುತ್ತಿತ್ತು.

ಇಂದು ಲಾಲ್‌ಬಾಗ್ ರಾಜಾನನ್ನು ವೀಕ್ಷಿಸಲು ಆರೇಳು ಗಂಟೆಗಳ ಕಾಲ ಭಕ್ತರು ಸರದಿಯಲ್ಲಿ ನಿಲ್ಲಬೇಕು. ಎಂಬತ್ತರ ದಶಕದಲ್ಲಿ ಹದಿನೈದು ನಿಮಿಷದಲ್ಲೇ ಗಣಪತಿ ದರ್ಶನ ಮಾಡಿ ಬರುತ್ತಿದ್ದುದು ಇಂದಿಗೂ ನೆನಪಾಗುತ್ತದೆ. ಇಡೀ ಮುಂಬೈ ಇಲ್ಲೇ ಇದೆಯೇನೋ ಎಂಬಂತೆ ಜನ ದಟ್ಟಣೆ ನೆರೆದಿರುತ್ತದೆ. ಅನೇಕರಿಗೆ ಲಾಲ್‌ಬಾಗ್ ರಾಜಾ ಗಣಪತಿ ಮೂರ್ತಿಯ ಪಾದಸ್ಪರ್ಶ ಮಾಡುವುದೇ ಪವಿತ್ರ ಪಾವನೆಯ ಭಾವನೆ. ಹಾಗೆ ನೋಡಿದರೆ ಮುಂಬೈಯಲ್ಲಿ ಭವ್ಯ ಗಣೇಶ ಮಂಡಳಿಗಳು ಅನೇಕ.

ಮಹಾರಾಷ್ಟ್ರದ ಮಹಾಪರ್ವ ಅಂದರೆ ಹತ್ತು ದಿನಗಳ ಗಣೇಶೋತ್ಸವ. ಪುಣೆ ಮತ್ತು ಮುಂಬೈ ಗಣೇಶೋತ್ಸವಕ್ಕೆ ವಿಶೇಷ ಆಕರ್ಷಣೆ. ಪುಣೆಯಲ್ಲಿ ಪ್ರಥಮ ಸಾರ್ವಜನಿಕ ಗಣೇಶೋತ್ಸವ ದಗಡೂ ಶೇಟ್ ಹಲ್ವಾಯಿಗೆ ವಿಶೇಷ ಸ್ಥಾನ. ಆದರೆ ಡಜನ್‌ಗೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಸಿದ್ಧ ಸಮುದ್ರ ತೀರಗಳನ್ನು ಹೊಂದಿರುವ ಮುಂಬೈ ಮಹಾನಗರದಲ್ಲಿನ ಸಾರ್ವಜನಿಕ ಗಣೇಶೋತ್ಸವಕ್ಕೆ ತನ್ನದೇ ಭಿನ್ನ ಮೆರುಗು ಇದೆ.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ನಂತರ ಮುಂಬೈಯ ಸಾರ್ವಜನಿಕ ಗಣೇಶೋತ್ಸವದ ಥೀಮ್ ಕೂಡ ಬದಲಾಗಿದೆ. ಕೆಲವು ಮಂಡಳಿಗಳು 20ರಿಂದ 25 ಅಡಿ ಎತ್ತರದ ಗಣೇಶನ ಪ್ರತಿಮೆಯನ್ನು ಪ್ರತಿಷ್ಠಾಪಿಸುತ್ತವೆ.

### ಚಾರಿತ್ರಿಕ ರೂಪ

ಪೌರಾಣಿಕ ಕಥೆ ಆಧಾರಿತ ಧಾರ್ಮಿಕ ಆಚರಣೆ ಚಾರಿತ್ರಿಕ ರೂಪ ಪಡೆದಿದೆ. ಈ ಹಬ್ಬದ ಬೇರುಗಳು ಭಾರತದ ಇತಿಹಾಸದ ಜೊತೆ ಬೆಸೆದುಕೊಂಡಿವೆ. ಶಿವಾಜಿ ಮಹಾರಾಜ ಪುಣೆಯಲ್ಲಿ 1630 1680ರಲ್ಲಿ ಈ ಹಬ್ಬವನ್ನು ಮೊದಲು ಆಚರಿಸಿದ ಎಂದು ಹೇಳಲಾಗುತ್ತದೆ. 18ನೇ ಶತಮಾನದಲ್ಲಿ, ಪೇಶ್ವೆಗಳೂ ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಭಾದ್ರಪದ ಮಾಸದಲ್ಲಿ ಸಾರ್ವಜನಿಕವಾಗಿ ಗಣೇಶೋತ್ಸವವನ್ನು ಆಚರಿಸಲು ಪ್ರಾರಂಭಿಸಿದರಂತೆ. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಬಾಲಗಂಗಾಧರ ತಿಲಕರು ಈ ಉತ್ಸವಕ್ಕೆ ಬೇರೆಯದೇ ಆಯಾಮವನ್ನು ಕಲ್ಪಿಸಿದರು. 1892ರಲ್ಲಿ ಬ್ರಿಟಿಷ್ ಸರ್ಕಾರ ನಿರ್ದಿಷ್ಟ ಒಂದು ಸ್ಥಳದಲ್ಲಿ ಗುಂಪಾಗಿ ಸೇರಲು ನಿಷೇಧವನ್ನು ವಿಧಿಸಿತ್ತು. ಈ ಉತ್ಸವ ಅವರ ಕಾನೂನು ಭಂಗಕ್ಕೆ ದಾರಿಯನ್ನು ಮಾಡಿಕೊಟ್ಟಿತು. ಸಂಸ್ಕೃತಿಯ ಗೌರವ ಮತ್ತು ರಾಷ್ಟ್ರೀಯತೆಯ ಭಾವನೆಯನ್ನು ಜನರಲ್ಲಿ ತುಂಬಲು ಇದು ಸಹಕಾರಿ ಎಂದು ತಿಲಕರು ಭಾವಿಸಿದ್ದರು. ತಿಲಕರ ಈ ಚಿಂತನೆಯ ಹಿಂದೆ ಬ್ರಿಟಿಷರ ವಿರುದ್ಧ ಸಮಾಜದ ಎಲ್ಲ ವರ್ಗಗಳನ್ನು ಒಗ್ಗೂಡಿಸುವ ಆಶಯ ಇತ್ತು. ■